ಅಧ್ಯಕ್ಷರು :- ಪ್ರಸ್ತಾವ ಏನೆಂದರೆ, "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಸ್. ಸುರೇಶ್ ಕುಮಾರ್(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :- ಮಾನ್ಯ ಅಧ್ಯಕ್ಷರೆ, 2009ನೇ ಸಾಲಿನ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ (ತಿದ್ದುಪಡಿ)ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು:- ಪ್ರಸ್ತಾವ ಏನೆಂದರೆ, "2009ನೇ ಸಾಲಿನ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ (ತಿದ್ದುಪಡಿ)ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

(3) ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ,2009

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಕರುಣಾಕರ ರೆಡ್ಡಿ (ಕಂದಾಯ ಸಚಿವರು) :- ಮಾನ್ಯ ಅಧ್ಯಕ್ಷರೆ, "2009ನೇ ಸಾಲಿನ ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಕರುಣಾಕರ ರೆಡ್ಡಿ (ಕಂದಾಯ ಸಚಿವರು) :- ಮಾನ್ಯ ಅಧ್ಯಕ್ಷರೆ ಸದರಿ ವಿಧೇಯಕಕ್ಕೆ ಸಂಬಂಧಪಟ್ಟಂತೆ ವಿವರಣೆ ಕೊಡುವುದಕ್ಕೆ ಬಯಸುತ್ತೇನೆ. ಮಾನವ ಕಲ್ಯಾಣಕ್ಕಾಗಿ ಕನಕದಾಸರು ಮಾಡಿರುವ ಸಾಧನೆ ಮತ್ತು ನೀಡಿರುವ

ಕೊಡುಗೆಯನ್ನು ಅವರ ಘನತೆಗೆ ತಕ್ಕ ವಿಧಾನದಲ್ಲಿ ಈ ಸಮಾಜಕ್ಕೊಂದು ಸೂಕ್ತ ರೀತಿಯಲ್ಲಿ ತಿಳಿಸಿಕೊಡುವ ದೃಷ್ಟಿಯಿಂದ 2002ರಲ್ಲಿ ಕನಕದಾಸರ ಟ್ರಸ್ಟ್ ಅನ್ನು ಕರ್ನಾಟಕ ಸರ್ಕಾರ ರಚನೆ ಮಾಡಿತ್ತು. ಆದರೆ, ಈ ಟ್ರಸ್ಟ್‌ನ ಕಾರ್ಯಕ್ಷೇತ್ರ ಬಹಳ ಸೀಮಿತವಾಗಿತ್ತು. ಕನಕದಾಸರ ಬಗ್ಗೆ ಅಧ್ಯಯನ, ಸಂಶೋಧನೆ, ಸಂಸ್ಕೃತಿ, ಶಿಕ್ಷಣ ಮತ್ತು ಪ್ರಸಾರ ಕಾರ್ಯ ಹಾಗೂ ಅವರ ಜನ್ಮಸ್ಥಳದ ಪರಿಸರದ ಅಭಿವೃದ್ಧಿ ಇವು ಬಹುಮುಖ್ಯವಾದ ವಿಷಯಗಳಾದುದರಿಂದ ಮತ್ತು ಅವುಗಳ ಬಗ್ಗೆ ವ್ಯಾಪಕ ವ್ಯವಸ್ಥೆ ಮಾಡಬೇಕಾದ ಅಗತ್ಯವಿರುವುದರಿಂದ ಈ ಎಲ್ಲ ಉದ್ದೇಶಗಳನ್ನು ಸೂಕ್ತವಾಗಿ ಮತ್ತು ಸಮರ್ಪಕವಾಗಿ ಈಡೇರಿಸುವುದಕ್ಕಾಗಿ ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರವನ್ನು ರಚಿಸಬೇಕೆಂದು ಸರ್ಕಾರವು ಪ್ರಸ್ತಾಪಿಸಿದೆ. ಇವತ್ತು ಕಾಗಿನೆಲೆಯಲ್ಲಿರುವ ಪರಂಪರೆಯ ತಾಣಗಳು ಮತ್ತು ಸ್ಮಾರಕಗಳನ್ನು ಅಭಿವೃದ್ಧಿ ಮಾಡಬೇಕೆಂಬ ಉದ್ದೇಶ ಇದೆ. ಕನಕದಾಸರ ಜನ್ಮಸ್ಥಳ, ಕೆಂಗೇರಿ ಕೆರೆ, ಕನಕದಾಸರ ಪಂಚಸಮಿತಿ ಮತ್ತು ಶ್ರೀರಂಗನಾಥರ ದೇವರ ಸ್ಥಳವಾಗಿರಬಹುದು ಮತ್ತು ಇದೇ ರೀತಿಯಲ್ಲಿ ಕಾಗಿನೆಲೆ ಸ್ಥಳದಲ್ಲಿರುವ ಆದಿಕೇಶವ ದೇವಾಲಯ, ಕಾಳಹಸ್ತೇಶ್ವರ ಗುರುಪೀಠ, ಸಂಗಮೇಶ್ವರ ದೇವಾಲಯ, ಬಯಲು ಬಸವೇಶ್ವರ ದೇವಲಾಯ, ವೀರಭದ್ರೇಶ್ವರ ಮತ್ತು ಸೋಮೇಶ್ವರ ದೇವಾಲಯ, ಗಚ್ಚಿನ ಮಠ, ಕನಕದಾಸರ ಐಕ್ಯ ಸ್ಥಳವಾಗಿರುಬಹದು ಮತ್ತೆ ಇಂಗಳಗೊಂದಿಯ ಚನ್ನಕೇಶವ ದೇವಾಲಯ, ಕಲ್ಲೇಶ್ವರ ದೇವಾಲಯ, ಶಾಸನ ಮತ್ತು ಸತಿ ಕಲ್ಲು ಇರಬಹುದು.

ದಾಸನಕೊಪ್ಪದಲ್ಲಿ ಮಾರುತಿ ದೇವಸ್ಥಾನ ಆಗಿರಬಹುದು, ಕುಮ್ಮೂರು ತಿಮ್ಮಕೇಶವ ದೇವಾಲಯ ಆಗಿರಬಹುದು, ಕದರಮಂಡಲಗಿಯ ಆಂಜನೇಯ ದೇವಸ್ಥಾನ ಮತ್ತು ಶಾಸನ, ಕಲ್ಯಾಣಿ ಆಗಿರಬಹುದು ಇತ್ಯಾದಿ ವಿಚಾರಗಳನ್ನು ಅಭಿವೃದ್ಧಿ ಪಡಿಸಲಿಕ್ಕೆ ಒಂದು ಪ್ರಾಧಿಕಾರವನ್ನು ರಚನೆ ಮಾಡಬೇಕೆಂದು ಹೇಳಿ ಈ ವಿಧೇಯಕವನ್ನು ತಂದಿರುತ್ತೇವೆ.

ಶ್ರೀ ಟಿ.ಬಿ. ಜಯಚಂದ್ರ (ಶಿರಾ) :- ಮಾನ್ಯ ಅಧ್ಯಕ್ಷರೆ, ಈ ಪ್ರಾಧಿಕಾರವನ್ನು ರಚನೆ ಮಾಡುವುದಕ್ಕೆ ತಂದಿರುವ ಈ ವಿಧೇಯಕವನ್ನು ನಾನು ಸ್ವಾಗತಿಸುತ್ತೇನೆ. ಬಹಳ ಮುಖ್ಯವಾಗಿ ಕನಕದಾಸರ ವಿಶೇಷವಾಗಿ ಕಾಗಿನೆಲೆಯಲ್ಲಿರತಕ್ಕಂಥ ತಾಣಗಳು ಮತ್ತು ಸ್ಮಾರಕಗಳನ್ನು ಎಲ್ಲವನ್ನು ಸಂರಕ್ಷಣೆ ಮಾಡಬೇಕು ಎನ್ನತಕ್ಕಂಥ ಗುರಿಯನ್ನು ಇಟ್ಟುಕೊಂಡು, ಅದರ ಜೊತೆಗೆ ಕನಕದಾಸರ ಮನೆಮಾತಾಗಿರತಕ್ಕಂಥದ್ದು ಅವರ

ಕೀರ್ತನೆಯ ಹಿನ್ನಲೆಯಲ್ಲಿ ಸರಳವಾದ ಭಾಷೆಯಲ್ಲಿ ಮನತಟ್ಟುವಂಥ ರೀತಿಯಲ್ಲಿ ಹೃದಯವನ್ನು ಮುಟ್ಟಿಸುವಂಥ ರೀತಿಯಲ್ಲಿ ಕೀರ್ತನೆ ಇರತಕ್ಕಂಥದ್ದು ಬಹಳ ಮುಖ್ಯ. ಅದರಲ್ಲಿ ಸಾಕಷ್ಟು ಅಧ್ಯಯನಗಳು ಆಗಬೇಕಾಗಿದೆ. ಕನಕದಾಸರ ಹೆಸರಿನಲ್ಲಿ ಮಾಡಿರತಕ್ಕಂಥ ಕೃತಿಗಳು ನಾನಾ ರೀತಿಯಾಗಿ ನಾನಾ ಪ್ರಕಾರವಾಗಿ ಎಲ್ಲೆಲ್ಲೋ ಇರತಕ್ಕಂಥದ್ದನ್ನು ಒಂದು ಸಂಶೋಧನೆ ಮುಖಾಂತರ ಒಂದು ಸಮಗ್ರವಾದ ಕೃತಿ ಹೊರಗೆ ಬರುವ ಜವಾಬ್ದಾರಿಕೆಯನ್ನು ಮಾಡಬೇಕಾಗುತ್ತದೆ. ಅಷ್ಟೇ ಮುಖ್ಯ ಎಂದು ಹೇಳಬೇಕಾದರೆ, ಪ್ರಸಾರ ಕಾರ್ಯಕ್ರಮವನ್ನು ಹಾಕಿಕೊಳ್ಳುವುದು ಕೂಡ ಅಷ್ಟೆ ಮುಖ್ಯ. ಏಕೆಂದರೆ, ಅವರ ಕೀರ್ತನೆಗಳು ಯಾವೊತ್ತು ಕೂಡ ಜನಗಳಲ್ಲಿ ಹಾಗೂ ಅದರಲ್ಲಿ ವಿಶೇಷವಾಗಿ ಯುವಕರನ್ನು ಇವತ್ತು ಮನಮುಟ್ಟುವ ರೀತಿಯಲ್ಲಿ ಇವೆ. ಅವರ ಕೀರ್ತನೆಗಳು ಇವತ್ತು ಮನೆಮನೆಗೆ ತಲುಪತಕ್ಕಂಥ ರೀತಿಯಲ್ಲಿ ಯಾವುದೋ ಒಂದು ಕಾರ್ಯಕ್ರಮವನ್ನು ಇಟ್ಟುಕೊಂಡು distribution ತರಹ ಇಟ್ಟುಕೊಂಡು ಅದನ್ನು ಮನೆಮನೆಗೆ ತಲುಪಿಸುವಂಥ ಕಾರ್ಯಕ್ರಮವನ್ನು ಮಾಡಬೇಕು. ಅವರ ಕೀರ್ತನೆಗಳು ಏಕೆ ವಿಶೇಷವೆಂದು ಹೇಳಿದರೆ, ಬಹುಶ ಜಾತಿಯ ವ್ಯವಸ್ಥೆಯ ವಿರುದ್ಧ ದಾಸರ ಪರಂಪರೆಯಿಂದ ಯಾರಾದರೊಬ್ಬರು ಧ್ವನಿ ಎತ್ತಿದರು ಎನ್ನತಕ್ಕಂಥದ್ದು ಮುಖ್ಯ. ಅದರ ಜೊತೆಗೆ ಕನಕದಾಸರು ಕರ್ನಾಟಕದ ಮೂಲೆಮೂಲೆಗೂ ಅವರು ಮನೆಮಾತಾಗಿದ್ದರು. ಎಲ್ಲರ ಬಾಯಲ್ಲಿರುವ ದಾಸರಾಗಿದ್ದಾರೆ. ಹಾಗಾಗಿ ಬೇಗ ಅವರ ಕೀರ್ತನೆ ಮೂಲಕ ಜನಗಳನ್ನು ತಲುಪುವುದಕ್ಕೆ ಸಾಧ್ಯವಾಗುತ್ತದೆ. ಅದಕ್ಕೆ ಹೆಚ್ಚು ಗಮನವನ್ನು ಕೊಟ್ಟು ಪ್ರಸಾರ ಕಾರ್ಯ ಕೂಡ ಬಹಳ ಬೇಕು ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಬಹುಶಃ ಇಂತಹ ಪ್ರಾಧಿಕಾರವನ್ನು ಮಾಡುವಂಥ ಸಂದರ್ಭದಲ್ಲಿ ಆ ಜಾತಿಯ ವ್ಯವಸ್ಥೆ ಎಷ್ಟು ಹಾನಿಯಾಗಿದೆ ನಮ್ಮ ದೇಶದಲ್ಲಿ ಎನ್ನತಕ್ಕಂಥದ್ದನ್ನು ನೋಡಿದಾಗ, ಅದು ಯಾವುದೇ ಕ್ಷೇತ್ರದಲ್ಲಿ ಆಗಿರಲಿ, ಶಿಕ್ಷಣ, ರಾಜಕೀಯ ಯಾವುದೇ ಕ್ಷೇತ್ರದಲ್ಲಿ ಯಾವುದರಲ್ಲಿ ಆದರೂ ಕೂಡ ಜಾತಿ ಜಾತಿಯ ಮಧ್ಯೆ ದ್ವೇಷವನ್ನು ಎಲ್ಲೋ ಒಂದು ರೀತಿಯಲ್ಲಿ ಈ ರೀತಿಯಾದ ಒಂದು ಕಾರ್ಯಕ್ರಮದಿಂದ ಅದನ್ನು ತೊಡೆದು ಹಾಕಬೇಕಾಗುತ್ತದೆ. ಅದರಲ್ಲಿಯೂ ವಿಶೇಷವಾಗಿ ಈ ದೇಶಕ್ಕೆ ಸ್ವಾತಂತ್ರ್ಯ ಬಂದು 60 ವರ್ಷವಾದರೂ ಕೂಡ ನಮ್ಮ ಪ್ರಜಾಪ್ರಭುತ್ವದ ವ್ಯವಸ್ಥೆ ಏನಾಗಿದೆ ಎಂದರೆ ಜಾತಿ ಆಧಾರಿತವಾದ ಪ್ರಜಾಪ್ರಭುತ್ವ ಈ ದೇಶದಲ್ಲಿ ಜಾಸ್ತಿಯಾಗಿದೆ. ಇತ್ತೀಚಿನ ದಿನಗಳಲ್ಲಿ ಆ ಜಾತಿಯ ಭಾವನೆಗಳು ಜಾಸ್ತಿಯಾಗಿರತಕ್ಕಂಥದ್ದು ಮತ್ತು ದ್ವೇಷಗಳು ಜಾಸ್ತಿಯಾಗಿರತಕ್ಕಂಥ ಸಂದರ್ಭದಲ್ಲಿ

ಒಂದು ಕಡೆಗೆ ನಾವು ಪಾಠವನ್ನು ಕಲಿಯಬೇಕು. ಇವತ್ತು ಅಮೇರಿಕಾದಲ್ಲಿ ಒಬಾಮರವರು ಅಧ್ಯಕ್ಷರಾಗಿರುವಂಥ ಈ ಸಂದರ್ಭದಲ್ಲಿ, ಒಬ್ಬ ಕರಿಯ, ಇವತ್ತು ಕೆಳಸ್ತರದಲ್ಲಿರುವಂಥ ಒಬ್ಬ ವ್ಯಕ್ತಿ ಇವತ್ತು ಅಂತಹ ಒಂದು ದೊಡ್ಡ ದೇಶದ ಪ್ರಪಂಚದಲ್ಲಿರುವ ಒಂದು ಪ್ರಭಾವಿ ದೇಶದ ಒಂದು ಅಧ್ಯಕ್ಷ ಹುದ್ದೆಗೆ ಏರಬೇಕಾದಾಗ, ನಿಜವಾದ ಪ್ರಜಾಪ್ರಭುತ್ವ ಅಲ್ಲಿದೆ. ಆ ರೀತಿಯಾದಂಥ ಪ್ರಜಾಪ್ರಭುತ್ವ ನಮ್ಮಲ್ಲಿ ಇಲ್ಲ. ಅದನ್ನು ಪ್ರಭಾವಗೊಳಿಸಬೇಕಾದಾಗ ಅದನ್ನು ತಿಳಿಯಗೊಳಿಸಬೇಕಾದಾಗ, ಅದನ್ನು ಅರ್ಥಪೂರ್ಣವಾಗಿ ಮಾಡಬೇಕು ಎನ್ನುವ ಸಂದರ್ಭ ಬಂದಾಗ ಒಬಾಮರವರ ಇತಿಹಾಸವನ್ನು ಒಂದು ಕಡೆ ಇಡಬೇಕಾಗುತ್ತದೆ. ಈ ರೀತಿಯಾಗಿ ಯುವಕರ ಮನಸ್ಸನ್ನು ಬದಲಿಸಿ ಯುವಕರ ಮನಸ್ಸಿನ ದ್ವೇಷವನ್ನು ಕಡಿಮೆ ಮಾಡುವುದಕ್ಕೆ ಇವತ್ತು ಕನಕದಾಸರ ಕೀರ್ತನೆಗಳು ಹೆಚ್ಚು ಸಹಾಯಕವಾಗುತ್ತವೆ. ಪ್ರಾಧಿಕಾರವನ್ನು ತಂದಿರತಕ್ಕಂಥದ್ದನ್ನು ನಾನು ಮುಕ್ತಕಂಠದಿಂದ ಸ್ವಾಗತಿಸುತ್ತೇನೆ. ಅದರ ಜೊತೆಗೆ ಕನಕಜಯಂತಿಗೆ ಇವತ್ತು ರಜೆಯನ್ನು ಕೂಡ ಘೋಷಣೆ ಮಾಡಿರತಕ್ಕಂಥದ್ದು ಅದನ್ನು ಕೂಡ ಸ್ವಾಗತ ಮಾಡುತ್ತೇನೆ ಎನ್ನುವಂಥ ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಓಲೇಕಾರ ನೆಹರು ಚನ್ನಬಸಪ್ಪ (ಹಾವೇರಿ) :- ಮಾನ್ಯ ಅಧ್ಯಕ್ಷರೆ, ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ ತಿದ್ದುಪಡಿಯನ್ನು ತಂದಿರುವಂಥದ್ದನ್ನು ಬಹಳ ಅವಶ್ಯ ಎನ್ನುವಂಥದ್ದನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. 2007 ರಲ್ಲಿ ಪ್ರಾಧಿಕಾರವನ್ನು ರಚನೆ ಮಾಡುವಂಥ ಸಂದರ್ಭದಲ್ಲಿ ಕಾಗಿನೆಲೆಯ ಕನಕದಾಸರು ಹುಟ್ಟಿರುವ ಬಾಡ ಗ್ರಾಮ ಇದೆ ಹಾಗೂ ಅವರು ಹೆಚ್ಚು ಕಾಲ ಕಾಗಿನೆಲೆಯಲ್ಲಿ ಉಳಿದು ಅವರು ಅನೇಕ ಕೃತಿಗಳನ್ನು ರಚನೆ ಮಾಡುವುದರ ಮೂಲಕ ಅನೇಕ ಹಳ್ಳಿಗಳಲ್ಲಿ ಸಂಚಾರವನ್ನು ಮಾಡಿ ಆ ಜನರಲ್ಲಿ ಒಂದು ಪ್ರೇರಣೆಯನ್ನು ಮೂಡಿಸತಕ್ಕಂಥ ಕೆಲಸವನ್ನು ಮಾಡಿದಂಥ ಮಹಾನುಭಾವರು. ದಾಸರಲ್ಲಿ ಶ್ರೇಷ್ಠ ದಾಸರು ಕನಕದಾಸರು ಎಂದು ಹೇಳಿದರೆ ಅವರ ಕೃತಿಗಳು ಬಹಳ ಮೇರುವೃತ್ತಕ್ಕೆ ಏರುವಂಥ ಒಂದು ಸ್ಥಿತಿಯಲ್ಲಿ ಇರುವಂಥ ಸಂದರ್ಭದಲ್ಲಿ, ಅವುಗಳಿಗೆ ಹೆಚ್ಚು ಒತ್ತನ್ನು ಕೊಡುವಂಥ ಪರಿಸ್ಥಿತಿ ಇನ್ನೂ ನಿರ್ಮಾಣವಾಗಿಲ್ಲ. ಆ ನಿಟ್ಟಿನಲ್ಲಿ ಈಗ ಪ್ರಾಧಿಕಾರವಾದ ನಂತರ ಸನ್ಮಾನ್ಯ ಹಿಂದಿನ ಹಣಕಾಸು ಸಚಿವರಾಗಿರುವಂಥ ಸನ್ಮಾನ್ಯ ಯಡಿಯೂರಪ್ಪನವರು ಆ ಏಳೂವರೆ ಕೋಟಿ ರೂಪಾಯಿಗಳನ್ನು ಪ್ರಾಧಿಕಾರದ ಅಭಿವೃದ್ಧಿಗಾಗಿ ಬಿಡುಗಡೆ ಮಾಡುವುದರ ಮೂಲಕ ಮತ್ತು ಈ ವರ್ಷದ ಬಜೆಟ್‌ನಲ್ಲಿ

ಸುಮಾರು 12 ಕೋಟಿ ರೂಪಾಯಿಗಳನ್ನು ಅಲ್ಲಿ ಖರ್ಚು ಮಾಡಲಿಕ್ಕೆ ಇವತ್ತು ಇಟ್ಟಿರುವಂಥದ್ದನ್ನು ನೋಡಿದ್ದೇವೆಂದು ಹೇಳುವುದಾದರೆ, ಇದರ ಅಭಿವೃದ್ಧಿಯ ದ್ಯೋತಕವಾಗಿ ಇವತ್ತು ಅಂತಹ ಒಬ್ಬ ಮಹಾಮಹಿಮರನ್ನು ಎಲ್ಲಾ ಕಡೆ ಪ್ರಚಾರ ಕಾರ್ಯಕ್ಕೆ ವಿನಿಯೋಗಿಸುವಂಥದ್ದನ್ನು ಬಹಳ ಪ್ರಮುಖವಾಗಿರುವಂಥ ಒಂದು ವಿಚಾರ. ಈ ಸಂದರ್ಭದಲ್ಲಿ ಏನು 2007 ರಲ್ಲಿ ಪ್ರಾಧಿಕಾರದ ರಚನೆಯಾಗಿತ್ತು. ಅದು ರಚನೆಯಾಗುವಂಥ ಸಂದರ್ಭದಲ್ಲಿ ಅದು ಬಹಳ ಸಂಕುಚಿತವಾಗಿ ರಚನೆಯಾಗಿತ್ತು. ಈಗ ವಿಶಾಲವಾದ ಪ್ರದೇಶವನ್ನು ಹೊಂದಿಕೊಂಡು ಏನು ಕನಕದಾಸರು ಅಡ್ಡಾಡಿದಂಥ ಸುತ್ತಲು ಇರುವಂಥ ಭಾಗಗಳಾದ ಕದರಮಂಡಲಗಿಯಲ್ಲಿ ಮೋಹಿನಿ ತರಂಗಿಣಿ ಎನ್ನುವ ಕೃತಿಯನ್ನು ತಯಾರು ಮಾಡಿರುವಂಥ ಸ್ಥಳ ಅದು. ಆ ಕದರಮಂಡಲಗಿಯಲ್ಲಿ ಸುಮಾರು ವರ್ಷಗಳವರೆಗೆ ಅವರು ವಾಸ್ತವ್ಯವನ್ನು ಮಾಡಿ ಆ ಕೃತಿಯನ್ನು ರಚನೆ ಮಾಡುವುದರ ಮೂಲಕ ಅವರ ಭಾವನೆಗಳನ್ನು ಈ ಸಮಾಜಕ್ಕೆ ತಿಳಿಸುವಂಥ ಕೆಲಸವನ್ನು ಅವರು ಮಾಡಿದ್ದಾರೆ. ಅಂತಹ ಸಂದರ್ಭದಲ್ಲಿ ಅವರು ಕಾಗಿನೆಲೆ ಭಾಗದಿಂದ ಮತ್ತು ಸುತ್ತಲಿರುವ ಹಳ್ಳಿಗಳನ್ನು ಸೇರಿಸಿಕೊಂಡು ಏನು ತಿದ್ದುಪಡಿಯನ್ನು ಇವತ್ತು ಸರ್ಕಾರ ತರುತ್ತಿದೆ, ಅದು ಬಹಳ ಸೂಕ್ತವಾಗಿರುವಂಥದ್ದು ಅದಕ್ಕೆ ಬೆಂಬಲವನ್ನು ಸೂಚಿಸುತ್ತೇನೆ ಎನ್ನುವಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜಿ. ಕರುಣಾಕರ ರೆಡ್ಡಿ :- ಈ ಪ್ರಾಧಿಕಾರದ ವಿಧೇಯಕವನ್ನು ಅನುಮೋದಿಸಿಬೇಕೆಂದು ಮನವಿ ಮಾಡುತ್ತೇನೆ.

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ "2009ನೇ ಸಾಲಿನ ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2ರಿಂದ 47ರವರೆಗೆ

ಅಧ್ಯಕ್ಷರು :- "ಖಂಡ 2 ರಿಂದ 47ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 47ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ:

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ, "ಮೊದಲನೆಯ ಖಂಡ, ಧೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ಧೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮ ಗೊಳಿಸುವ ಸೂತ್ರ ಸಂಹಿತೆ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಜಿ. ಕರುಣಾಕರ ರೆಡ್ಡಿ (ಕಂದಾಯ ಸಚಿವರು) :- ಮಾನ್ಯ ಅಧ್ಯಕ್ಷರೆ, 2009ನೇ ಸಾಲಿನ ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ, "2009ನೇ ಸಾಲಿನ ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಅಧ್ಯಕ್ಷರು :- ಕರ್ನಾಟಕ ವೈದ್ಯೋಪಚಾರ ಸಿಬ್ಬಂದಿಯ ಮೇಲೆ ಹಿಂಸಾಚಾರವನ್ನು ಮತ್ತು ವೈದ್ಯೋಪಚಾರ ಸಂಸ್ಥೆಗಳ ಆಸ್ತಿಗೆ ಹಾನಿ ಮಾಡುವುದನ್ನು ನಿಷೇಧಿಸುವ ವಿಧೇಯಕ 2009 ವನ್ನು ತೆಗೆದುಕೊಳ್ಳೋಣ.

3. ಅಧ್ಯಕ್ಷರ ಅಪ್ಪಣೆಯ ಮೇರೆಗೆ ಪ್ರಸ್ತಾವಿಸಲಾದ ವಿಷಯಗಳು

ವಿಷಯ :- ಭಯೋತ್ಪಾದನೆ ವಿರೋಧಿ ವಿದ್ಯಾರ್ಥಿ ಜಾಗೃತಿ ಅಭಿಯಾನದ ಬಗ್ಗೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧಪಕ್ಷದ ನಾಯಕರು) :- ಮಾನ್ಯ ಅಧ್ಯಕ್ಷರೆ, ಅದಕ್ಕಿಂತಲೂ ಮುಂಚೆ ಒಂದು ವಿಷಯವನ್ನು ತಮ್ಮ ಗಮನಕ್ಕೆ ಮತ್ತು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ಮತ್ತು ಸದನದ ಎಲ್ಲಾ ಸದಸ್ಯರ ಗಮನಕ್ಕೂ